## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಬೀದರ್‌ನ ನೈಟಿಂಗೇಲ್ ನರ್ಸಿಂಗ್ ಶಾಲೆಗೆ ಮಾನ್ಯತೆ

---------

**ಓದಲಾಗಿದೆ:**

ದಿನಾಂಕ: ೧೨-೧೧-೨೦೦೪ ಸಂ: ಕರಾಶುಪ ೧೬೦೭: ೨೦೦೩ ಕರ್ನಾಟಕ ನರ್ಸಿಂಗ್ ಪರಿಷತ್‌ನ ಪತ್ರ

**ಪೀಠಿಕೆ:**

೧) ೧೯೬೧ರ ಕರ್ನಾಟಕ ನರ್ಸಸ್, ಮಿಡ್‌ವೈವ್ಸ್ ಮತ್ತು ಹೆಲ್ತ್ ವಿಸಿಟರ್ಸ್ ಅಧಿನಿಯಮದ ೨೩ನೇ ಪ್ರಕರಣದೊಂದಿಗೆ ಓದಲಾದ ಕರ್ನಾಟಕ ರಾಜ್ಯ ನರ್ಸಿಂಗ್ ಕೌನ್ಸಿಲ್ ಬೈಲಾದ ೫೦ನೇ ನಿಯಮದಡಿ ಬೀದರ್‌ನ ನೈಟಿಂಗೇಲ್ ನರ್ಸಿಂಗ್ ಶಾಲೆಯು ಕರ್ನಾಟಕ ರಾಜ್ಯ ನರ್ಸಿಂಗ್ ಪರಿಷತ್ತಿಗೆ ಅರ್ಜಿ ಸಲ್ಲಿಸಿತ್ತು. ಸದರಿ ೨೩ನೇ ಪ್ರಕರಣದಡಿ ಸಮಿತಿಯನ್ನು ರಚಿಸಿ ಶಾಲೆಯನ್ನು ಪರಿವೀಕ್ಷಣೆಗೆ ಗುರಿಪಡಿಸಿ ಅದರ ವರದಿಯನ್ನು ಪರಿಷತ್ ಪಡೆದಿತ್ತು. ಪರಿಷತ್‌ನಿಂದ ನಿಯೋಜಿಸಲ್ಪಟ್ಟ ಪರಿವೀಕ್ಷಣಾ ತಂಡವು ನೀಡಿದ ವರದಿಯಲ್ಲಿನ ಶಿಫಾರಸ್ಸಿನ ಬೆಳಕಿನಲ್ಲಿ ಈ ಪ್ರಕರಣವನ್ನು ಪರಿಷತ್ ಪರಿಶೀಲಿಸಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದೆ. ಸರ್ಕಾರವು ಇದನ್ನು ಪರಿಶೀಲಿಸಿ ಡಿಪ್ಲೋಮಾ ಇನ್ ನರ್ಸಿಂಗ್ ಕೋರ್ಸಿನೊಂದಿಗೆ ೨೦೦೪-೦೫ನೇ ಸಾಲಿನಿಂದ ಜಾರಿಗೆ ಬರುವಂತೆ ಮತ್ತು ಕೆಲವು ಷರತ್ತುಗಳನ್ನು ಕಡ್ಡಾಯವಾಗಿ ಪೂರೈಸಬೇಕೆಂದು ಹಾಗೂ ಕೆಲವು ನಿಬಂಧನೆಗಳಿಗೆ ಒಳಪಡಿಸಿ ಮಂಜೂರಾತಿ ನೀಡಲು ತೀರ್ಮಾನಿಸಿದೆ.

### ಸರ್ಕಾರಿ ಆದೇಶ ಸಂಖ್ಯೆ: ಆಕುಕ ೧೫೯ ಎಂಎಂಇ ೨೦೦೪
### ಬೆಂಗಳೂರು, ದಿನಾಂಕ: ೨೦.೧೨.೨೦೦೪

೨) ೧೯೬೧ರ ಕರ್ನಾಟಕ ನರ್ಸಿಂಗ್, ಮಿಡ್‌ವೈವ್ಸ್ ಮತ್ತು ಹೆಲ್ತ್ ವಿಸಿಟರ್ಸ್ ಅಧಿನಿಯಮದ ೨೩ನೇ ಪ್ರಕರಣದೊಂದಿಗೆ ಓದಲಾದ ಕರ್ನಾಟಕ ರಾಜ್ಯ ನರ್ಸಿಂಗ್ ಕೌನ್ಸಿಲ್‌ನ ಬೈಲಾದ ೫೦ನೇ ನಿಯಮದ ರೀತ್ಯಾ ಮಾಡಲಾಗಿರುವ ಶಿಫಾರಸ್ಸನ್ನು ಆಧರಿಸಿ ೫೦(ಐವತ್ತು) ವಿದ್ಯಾರ್ಥಿಗಳ ಪ್ರವೇಶ ಮಿತಿಯ ಡಿಪ್ಲೋಮೊ ಇನ್ ನರ್ಸಿಂಗ್ ಕೋರ್ಸಿನೊಂದಿಗೆ ಬೀದರ್‌ನ ನೈಟಿಂಗೇಲ್ ನರ್ಸಿಂಗ್ ಶಾಲೆಗೆ ಮಾನ್ಯತೆಯನ್ನು ಮತ್ತು ಅನುಮೋದನೆಯನ್ನು ೨೦೦೪-೦೫ನೇ ಶೈಕ್ಷಣಿಕ ವರ್ಷದಿಂದ ಜಾರಿಗೆ ಬರುವಂತೆ ನೀಡಲು ಸರ್ಕಾರ ಮಂಜೂರು ಮಾಡಿದೆ. ಈ ಮಂಜೂರಾತಿಯು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟಿರುತ್ತದೆ.

**ಷರತ್ತುಗಳು:**

(೧) ಕರ್ನಾಟಕ ರಾಜ್ಯ ನರ್ಸಿಂಗ್ ಪರಿಷತ್ ಹಾಗೂ ಭಾರತೀಯ ನರ್ಸಿಂಗ್ ಪರಿಷತ್ತಿನ ಅನುಮೋದನೆ ಪಡೆಯತಕ್ಕದ್ದು.

(೨) ಭಾರತೀಯ ಶುಶ್ರೂಷಾ ಪರಿಷತ್ತು ಹಾಗೂ ಕರ್ನಾಟಕ ರಾಜ್ಯ ಶುಶ್ರೂಷಾ ಪರಿಷತ್ತಿನವರು ನಿಗದಿ ಪಡಿಸಿರುವ ಪಠ್ಯಕ್ರಮ ಮತ್ತು ಮಿಡ್‌ವೈಫ್ ಹಾಗೂ ನರ್ಸಿಂಗ್ ಪರೀಕ್ಷಾ ಮಂಡಳಿಯ ಕಾರ್ಯ-ಯೋಜನೆಗಳನ್ನು ಪಾಲಿಸುವುದು.

(೩) ಕರ್ನಾಟಕ ರಾಜ್ಯ ಶುಶ್ರೂಷಾ ಪರಿಷತ್ತಿನವರು ಮತ್ತು ಭಾರತೀಯ ನರ್ಸಿಂಗ್ ಕೌನ್ಸಿಲ್‌ರವರು ನಿಗದಿಪಡಿಸಿರುವ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸುವುದು.

(೪)ಭಾರತೀಯ ನರ್ಸಿಂಗ್ ಪರಿಷತ್ ಮತ್ತು ಕರ್ನಾಟಕ ನರ್ಸಿಂಗ್ ಪರಿಷತ್ ಮಾರ್ಗಸೂಚಿಯನ್ವಯ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದು.

(೫) ಈ ಸಂಸ್ಥೆಗಳಿಗೆ ಯಾವುದೇ ಕಾರಣಕ್ಕೂ ಸರ್ಕಾರದಿಂದ ಅನುದಾನ ನೀಡಲಾಗುವುದಿಲ್ಲ.

(೬) ಸಂಸ್ಥೆಯವರು ಅರ್ಹರಾದ ವಿದ್ಯಾರ್ಹತೆ ಹೊಂದಿದ ಹಾಗೂ ಅನುಭವವಿರುವ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಯನ್ನು ನೇಮಿಸಿಕೊಳ್ಳತಕ್ಕದ್ದು.

(೭) ನರ್ಸಿಂಗ್ ಮತ್ತು ವೈದ್ಯಕೀಯ ವಿಷಯಕ್ಕೆ ಸಂಬಂಧಿಸಿದ ಪುಸ್ತಕ ಹಾಗೂ ನಿಯತಕಾಲಿಕೆಗಳೊಂದಿಗೆ ವಾಚನಾಲಯ ಸೌಲಭ್ಯವನ್ನು ಒದಗಿಸತಕ್ಕದ್ದು.

(೮)ಭಾರತೀಯ ನರ್ಸಿಂಗ್ ಪರಿಷತ್ತಿನ ಪರಿನಿಯಮಾವಳಿಯನುಸಾರ ಸ್ವಂತ ಆಸ್ಪತ್ರೆಯನ್ನು ೫ ವರ್ಷಗಳ ಕಾಲಮಿತಿಯೊಳಗೆ ಹೊಂದತಕ್ಕದ್ದು.

(೯) ೨೦೦೩ರ ಕರ್ನಾಟಕ ಡಿಪ್ಲೋಮಾ ಇನ್ ಜನರಲ್ ನರ್ಸಿಂಗ್, ಮಿಡ್‌ವೈಫರಿ ಃ ಸೈಕಿಯಾಟ್ರಿ ಕೋರ್ಸುಗಳ ಪ್ರವೇಶಕ್ಕೆ ಅಭ್ಯರ್ಥಿಗಳ ಆಯ್ಕೆ ನಿಯಮಾವಳಿ ಅನುಸಾರವೇ ಅಥವಾ ರಾಜ್ಯ ಸರ್ಕಾರವು ಕಾಲಕಾಲಕ್ಕೆ ಹೊರಡಿಸುವ ಪ್ರವೇಶ ನಿಯಮಾವಳಿ ಅನುಸಾರವೇ ಅಭ್ಯರ್ಥಿಗಳ ಪ್ರವೇಶವನ್ನು ಪಡೆಯತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ ,

(ಎಸ್.ನಾಗರಾಜು)
ಸರ್ಕಾರದ ಅಧೀನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ವೈದ್ಯಕೀಯ ಶಿಕ್ಷಣ)

ಇವರಿಗೆ:

೧)ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಆಯುಕ್ತರು:ನಿರ್ದೇಶಕರು, ಬೆಂಗಳೂರು-೫೬೦೦೦೯

೨)ವೈದ್ಯಕೀಯ ಶಿಕ್ಷಣ ನಿರ್ದೇಶಕರು, ಬೆಂಗಳೂರು-೫೬೦೦೦೯.

೩)ರಿಜಿಸ್ಟ್ರಾರ್, ಕರ್ನಾಟಕ ನರ್ಸಿಂಗ್ ಕೌನ್ಸಿಲ್, ಸೂರಿ ಅಪಾರ್ಟ್‌ಮೆಂಟ್, ನಂ.೭೧, ೬ನೇ ಎ- ಕ್ರಾಸ್, ಆನಂದರಾವ್ ಬಡಾವಣೆ, ಗಾಂಧಿನಗರ, ಬೆಂಗಳೂರು-೫೬೦೦೦೯

೪)ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರ [redacted] ಆಪ್ತ ಕಾರ್ಯದರ್ಶಿ.

೫) ಪ್ರಾಂಶುಪಾಲರು, ನೈಟಿಂಗೇಲ್ ನರ್ಸಿಂಗ್ ಶಾಲೆ, ನಂ. ೩-೬-೯೧ ಬಿದ್ರಿವೆಲ್ಲಿ ಕಾಲೋನಿ, ಚಿದ್ರಿ ರಸ್ತೆ, ಬೀದರ್ ೫೮೫೪೦೩

೬) ಅಧ್ಯಕ್ಷರು: ಕಾರ್ಯದರ್ಶಿ, ಕರ್ನಾಟಕ ಎಜುಕೇಷನ್ ಸೊಸೈಟಿ, ಬೀದರ್ ೫೮೫೪೦೧.